Resignation of his seat in the Assembly by Sri K. Chengalaraya Reddy.

Mr. SPEAKER.—I have to report to the House, as required by Rule 177, that Sri K. Chengalaraya Reddy has resigned his seat in the Assembly.

PANEL OF CHAIRMEN.

Mr. SPEAKER.—Under Rule 6 of the Rules of Procedure and Conduct of Business in the Mysore Legislative Assembly, the following Members will form the Panel of Chairmen .—

Sri A. Bheemappa Naik
,, V. M. Mascarenhas
,, Mulka Govinda Reddy and
,, D. Venkatesh.

———

Condolence *re*: Demise of two ex-Members.

(1) *The Late Sri S. C. Malliah.*

ಶ್ರೀ ಕೆ. ಹನುಮಂತಯ್ಯ (ಸಭಾನಾಯಕರು).—ಸ್ವಾಮಿ, ಈ ಸಭೆಯ ಪರವಾಗಿ ಎರಡು ಸಂತಾಪದ ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ತಮ್ಮ ಮತ್ತು ಈ ಸಭೆಯ ಅನುಮತಿಯನ್ನು ಕೇಳುತ್ತಿದ್ದೇನೆ. ಈ ಶಾಸನ ಸಭೆ ಹೊಸದಾಗಿ ರಾಜ್ಯಾಂಗ ರಚನೆಯ ಪ್ರಕಾರ ಸ್ಥಾಪನೆಯಾಗಿದ್ದರೂ ಕೂಡ ಮೈಸೂರು ದೇಶದಲ್ಲಿ ಪ್ರಜಾಪ್ರತಿನಿಧಿ ಸಭೆ (ಈ ಸಭೆಯೇ ಸ್ವಲ್ಪ ಹೆಸರು ಬದಲಾವಣೆಯಾದದ್ದಾಗಿ) ಈ ದೇಶದ ಆಗುಹೋಗುಗಳನ್ನು ಪರಿಶೀಲಿಸುತ್ತಿತ್ತು. ಆದ್ದರಿಂದ ಶಾಸನ ಸಭೆಯಲ್ಲಿ—ಈ ಸಭೆಯಲ್ಲೇ ಆಗಲಿ, ಅಥವಾ ಹಿಂದಿನ ಶಾಸನಸಭೆಗಳಲ್ಲೇ ಆಗಲಿ—ಸದಸ್ಯರಾಗಿದ್ದು ದೇಶ ಸೇವೆಮಾಡಿರತಕ್ಕಂಥವರ ವಿಷಯವನ್ನು ಪ್ರಸ್ತಾಪಿಸುವುದು ಸೂಕ್ತವಾಗಿದೆ. ಆ ರೀತಿಯಾಗಿ ಮಹತ್ತರವಾದ ದೇಶಸೇವೆಯನ್ನು ಮಾಡಿದ ಇಬ್ಬರು ಮಾಜಿ ಸದಸ್ಯರುಗಳು ದೈವಾಧೀನರಾಗಿದ್ದಾರೆ. ಮೊದಲು ಅವರಲ್ಲಿ ಒಬ್ಬರ ವಿಷಯವನ್ನು ಪ್ರಸ್ತಾಪಿಸಿ, ಅನಂತರ ಇನ್ನೊಬ್ಬರ ವಿಷಯ ತೆಗೆದುಕೊಳ್ಳುತ್ತೇನೆ.

ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರು ಸುಮಾರು ಕಾಲು ಶತಮಾನಗಳವರೆಗೂ ಡಿಸ್ಟ್ರಿಕ್ಟ್ ಬೋರ್ಡ್, ಪ್ರಜಾಪ್ರತಿನಿಧಿಸಭೆ, ನ್ಯಾಯವಿಧಾಯಕಸಭೆ—ಈ ತೆರನಾಗಿ ಸ್ಥಳೀಯ ಸಂಸ್ಥೆಗಳಲ್ಲೂ ಮತ್ತು ಶಾಸನಸಭೆಗಳಲ್ಲೂ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಹಾಗೆಯೇ ಗ್ರಾಮಾಂತರಗಳಲ್ಲಿನ ನಮ್ಮ ಜನರಿಗೆ ಇನ್ನೂ ನಾನಾ ವಿಧದಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ರಾಜಕೀಯದಲ್ಲಿ ಬಹಳ ನುರಿತ, ಹೆಸರು ಪೆತ್ತ ಪ್ರಖ್ಯಾತ ವ್ಯಕ್ತಿಗಳಾಗಿದ್ದರು. ಮೈಸೂರು ದೇಶದ ಒಂದು ವೈಶಿಷ್ಟ್ಯವೆಂದರೆ—ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಅಲ್ಪಸ್ವಲ್ಪ ಇದ್ದಿದ್ದರೂ ಕೂಡ ಎಲ್ಲರೂ ಮಾಡುತ್ತಿರುವ ಕೆಲಸ ದೇಶಸೇವೆಯ ಕೆಲಸವೆಂದೂ, ಪರಸ್ಪರ ಸ್ನೇಹ, ಸೌಹಾರ್ದ, ಮಿತ್ರತ್ವ ಉಳಿಯಬೇಕು ಮತ್ತು ಬೆಳೆಯಬೇಕು ಎಂದೂ ಭಾವಿಸಿ ನಡೆದುಕೊಳ್ಳುವುದು. ಈ ಸತ್ಸಂಪ್ರದಾಯ ಸತತವಾಗಿ ಬೆಳೆದುಬಂದಿದೆ. ಶ್ರೀಮಾನ್ ಮಲ್ಲಯ್ಯನವರು ಇಂದು ಯಾವ ಪಕ್ಷ ಸರ್ಕಾರವನ್ನು ವಹಿಸಿಕೊಂಡಿದೆಯೋ ಆ ಪಕ್ಷಕ್ಕೆ ಪ್ರತಿಯಾದ ಪಕ್ಷಕ್ಕೆ ಸೇರಿದವರಾಗಿದ್ದರೂ ಮತ್ತು ಅನೇಕ ಸಂದರ್ಭಗಳಲ್ಲಿ ಅವರ ನೀತಿ ನಿಯಮಗಳನ್ನು ಒಪ್ಪದೆ ಇದ್ದರೂ, ಅವರ ನಿಸ್ಪೃಹತ್ವದಲ್ಲಿ, ಅವರ ದೇಶಸೇವಾ ನುನೋವೃತ್ತಿಯಲ್ಲಿ ಯಾವ ತರದ ರೋಷವನ್ನು ಕಂಡುಹಿಡಿಯುವುದಕ್ಕೂ ಅವಕಾಶವಿಲ್ಲ. ನಿಸ್ಪೃಹರಾಗಿ ಅವರು ದೇಶಸೇವೆಯನ್ನು ಸಲ್ಲಿಸಿದ್ದಾರೆ. ಇಂಥ ಒಬ್ಬ ದೊಡ್ಡ ವ್ಯಕ್ತಿಯನ್ನು ನಾವು ಈ ದಿವಸ ಕಳೆದುಕೊಂಡಿರುವುದರಿಂದ ನಮ್ಮ ರಾಜಕೀಯದಲ್ಲೇ ಒಂದು ದೊಡ್ಡ ಕೊರತೆಯು ಕಾಣುವ ಹಾಗಾಗಿದೆ.

ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಹೇಳಿ ನಾನು ಈ ಸಭೆಯ ಪರವಾಗಿ ಪ್ರಾರ್ಥನೆಮಾಡುತ್ತೇನೆ.

Sri J. MOHAMED IMAM (Jagalur).—Sir, I fully associate myself with the sentiments expressed by the Leader of the House and I offer on my behalf, on behalf of my party and on behalf of the entire House, my sincere condolences to the members of the bereaved family. It is our duty, we cannot but help expressing our profound sorrow at the passing away of Sri S. C. Malliah at a comparatively early age. I first came to know him in the year 1928 when both of us were colleages in the Representative Assembly. Since that time I knew intimately the services he had been rendering to the State and to the people of Mysore in one capacity or another. He was practically one of the leaders of the State and he was many a time instrumental in moulding the policies of the State. He had served as a member of the Legislative Assembly and he had served in more than one term as the President of the District Board. Not only in these capacities but also in various other capacities he had served the State, as mentioned by the Leader of the House, selflessly and without any selfish desire. So I again offer after my sincere condolences on behalf of the House to the members of the late Sri S. C. Malliah. Our heartfelt sympathies may be conveyed to them.

ಶ್ರೀ ಎಚ್. ಕೆ. ವೀರಣ್ಣಗೌಡ (ಮುದ್ದೂರು).—ಸ್ವಾಮಿ, ಈ ಸಭಾನಾಯಕರೂ ಮತ್ತು ಮಾನ್ಯ ಮಿತ್ರರಾದ ಶ್ರೀಮಾನ್ ಇಮಾಂರವರೂ ಹೇಳಿದ ಮಾತುಗಳನ್ನು ಅನುಮೋದಿಸುತ್ತಾ ನಾನೂ ಎರಡು ಮಾತು

(ಶ್ರೀ ಎಚ್. ಕೆ. ವೀರಣ್ಣಗೌಡ)

ಗಳನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಶ್ರೀಮಾನ್ ಮಲ್ಲಯ್ಯನವರು ಸುಮಾರು ಕಳೆದ 20 ವರ್ಷಗಳಿಂದ ನನ್ನ ರಾಜಕೀಯ ಪ್ರತಿಸ್ಪರ್ಧಿಗಳಾಗಿದ್ದರು. ಅನೇಕ ಚುನಾವಣೆಗಳಲ್ಲಿ ನನಗೂ ಅವರಿಗೂ ಹೈಪೋಟಿ ಬೀಳುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಅವರು ಜಯಗಳಿಸುತ್ತಿದ್ದರು, ಕೆಲವು ಸಂದರ್ಭಗಳಲ್ಲಿ ನಾನು ಜಯಗಳಿಸುತ್ತಿದ್ದೆ. ಇಷ್ಟಾದರೂ ಶ್ರೀಮಾನ್ ಮಲ್ಲಯ್ಯನವರ ವಿಷಯದಲ್ಲಿ ಅತ್ಯಂತ ಗೌರವ ಮತ್ತು ಪ್ರೀತಿವಿಶ್ವಾಸಗಳು ನನಗಿತ್ತು ಎಂದು ಈ ಸಭೆಯ ಮುಂದೆ ಹೇಳಲಿಚ್ಛಿಸುತ್ತೇನೆ. ಶ್ರೀಯುತರು ನನ್ನ ಬಂಧುಗಳು ಮಾತ್ರವಲ್ಲದೆ, ಸ್ನೇಹಿತರೂ ಆಗಿದ್ದರು. ಸಾಮಾನ್ಯವಾಗಿ ಒಬ್ಬ ಮನುಷ್ಯ ಹುಟ್ಟಿದ ಮೇಲೆ ಅವನು ಸಾಯುವುದರೊಳಗಾಗಿ ತನ್ನ ಊರು, ತನ್ನ ತಾಲ್ಲೂಕು, ತನ್ನ ದೇಶ—ಇವುಗಳನ್ನು ತಾನು ಕಂಡದ್ದಕ್ಕಿಂತಲೂ ಒಂದು ಹೆಜ್ಜೆಯಷ್ಟಾದರೂ ಮುಂದಕ್ಕೆ ತಂದು ಅಭಿವೃದ್ಧಿಪಡಿಸಿದರೆ ಅತನ ಜನ್ಮ ಸಾರ್ಥಕವಾಯಿತೆಂದು ದೊಡ್ಡವರು ಹೇಳಿದ್ದಾರೆ. ಶ್ರೀಮಾನ್ ಮಲ್ಲಯ್ಯನವರ ವಿಚಾರದಲ್ಲಿ ಆ ಮಾತುಗಳು ಅಕ್ಷರಶಃ ನಿಜವೆಂದು ಹೇಳಬಹುದು. ಅವರು ಹುಟ್ಟಿದ ಸೋಮನ ಹಳ್ಳಿಯೆಂಬ ಸಣ್ಣ ಊರಿನ ಹೆಸರನ್ನು ಸಂಸ್ಥಾನದ ಲ್ಲೆಲ್ಲಾ ಬೆಳಗುವಂತೆ ಅವರು ಮಾಡಿದ್ದಾರೆ. ತಾಲ್ಲೂಕಿನವರಿಗೆ ಅವರು ಮಹದುಪಕಾರಮಾಡಿದ್ದಾರೆ. ಹಾಗೂ ಷಿಷ್ಠಾ ನದಿಯ ಎಡಭಾಗದ ಪ್ರದೇಶದ ಜನರಿಗೆ ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರ ಪ್ರಯತ್ನದಿಂದ ಆಗಿರುವ ಉಪಕಾರವನ್ನು ಅಲ್ಲಿನ ಜನರು ತಲೆತಲಾಂತರದವರೆಗೂ ನೆನೆಸಿಕೊಳ್ಳುವಂಥವಾಗಿದೆ. ಡಿಸ್ಟ್ರಿಕ್ಟು ಬೋರ್ಡ್ ಪ್ರೆಸಿಡೆಂಟರಾಗಿಯೂ ಮತ್ತು ಬೇರೆ ವಿಧವಾದ ಪ್ರಾತಿನಿಧ್ಯಹೊಂದಿದವರಾಗಿಯೂ ಜವಾಬ್ದಾರಿ ಸ್ಥಾನಗಳನ್ನು ಅವರು ವಹಿಸಿದ್ದಾಗ ಅವರು ಅನೇಕ ರೀತಿಯಲ್ಲಿ ಜನರಿಗೆ ಸಹಾಯಮಾಡಿದ್ದಾರೆ. ವಿಶ್ವೇಶ್ವರಯ್ಯ ನಾಲಾ, ಕನ್ನಂಬಾಡಿ ಕಟ್ಟೆ ಕೆಳಗಿನ ರೈತರಿಗೆ ಬಹಳಮಟ್ಟಿನ ಸೇವೆ ಸಲ್ಲಿಸಿದ್ದಾರೆ.

ಅದೇ ರೀತಿ, ಸಂಸ್ಥಾನಕ್ಕೂ ಕೂಡ ಸೇವೆ ಸಲ್ಲಿಸಿದ್ದಾರೆಂದರೆ ಅದು ಅತಿಶಯೋಕ್ತಿಯಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಹಳ್ಳಿಗಾಡಿನವರ ಸೌಕರ್ಯಕ್ಕಾಗಿ, ಅವರ ವಿದ್ಯಾಭ್ಯಾಸಕ್ಕೆ ನೂರಾರು ಮುಂತಾದುವುಗಳನ್ನು ಒದಗಿಸುವುದಕ್ಕಾಗಿ ಅವರು ಹಿಂದಿನ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಸರ್ಕಾರದವರೊಡನೆ ಹೋರಾಟ ಮಾಡಿ ಜನ ಸಾಮಾನ್ಯರಿಗೂ ಹಳ್ಳಿಗಾಡಿನವರಿಗೂ ಉಪಕಾರ ಮಾಡಿದ್ದಾರೆ. ದೇಶದ ಗಣ್ಯ ಪ್ರಜೆಯಾಗಿ ಪ್ರಮುಖ ಮುಖಂಡರಾಗಿ ಮತ್ತು ಜನರ ನಿಜವಾದ ಪ್ರತಿನಿಧಿಯೆನಿಸಿಕೊಂಡು ದೇಶ ಸೇವೆ ಮಾಡಿದಂಥ ಅವರು ಕಾಲಾಧೀನರಾದುದು ನಮಗೆ ಸಂತಾಪವನ್ನುಂಟುಮಾಡುತ್ತದೆ. ಆದ್ದರಿಂದ ಸಭಾ ನಾಯಕರೂ ಮತ್ತು ಶ್ರೀಮಾನ್ ಇಮಾಂರವರೂ ಹೇಳಿದ ಅಂಶಗಳನ್ನೆಲ್ಲ ಅನುಮೋದಿಸುತ್ತಾ, ಈ ಸಭೆಯ ಪರವಾಗಿ ಸಂತಾಪವನ್ನು ಅವರ ಸಂಸಾರದವರಿಗೆ ತಿಳಿಸಬೇಕೆಂದು ಆಶಿಸುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡ (ನಾಗಮಂಗಲ).—ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರ ವಿಚಾರವಾಗಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಹನುಮಂತಯ್ಯನವರು ಮತ್ತು ವಿರೋಧ ಪಕ್ಷದ ನಾಯಕರಾದ ಇಮಾಂರವರೂ ಮತ್ತು ಇತರರೂ ಅವರು ಮಾಡಿದಂಥ ಕೆಲಸಗಳನ್ನು ವಿವರಿಸಿದರು. ಮತ್ತು ಶ್ರೀಮಾನ್ ವೀರಣ್ಣಗೌಡರು ಆ ತಾಲ್ಲೂಕಿಗೆ ಅವರು ಎಷ್ಟರ ಮಟ್ಟಿಗೆ ಉಪಕಾರಮಾಡಿದ್ದಾರೆಂಬುದನ್ನು ಬಹಳ ಚೆನ್ನಾಗಿ ವಿವರಿಸಿದರು. ಮುಖ್ಯವಾಗಿ ಮನುಷ್ಯನ ಯೋಗ್ಯತೆ ಅವನು ಸತ್ತಾಗಲೇ ಗೊತ್ತಾಗುವುದು! ಪಾಪ ಸತ್ತರೆ ಒಂದು ತೃಣಕೂ ಅತ್ತಕಡೆ ನೋಡುವುದಿಲ್ಲ. ಅದೇ ನೋಡಿ! ಮೊನ್ನೆ ದಿವಸ ನಾವು ಅಲ್ಲಿ ಹೋಗಿದ್ದಾಗ ಕೂತುಕೊಳ್ಳುವುದಕ್ಕೂ ಜಾಗವಿಲ್ಲದ ಹಾಗೆ ಜನ ಕಿಕ್ಕಿರಿದಿತ್ತು. ಅಷ್ಟು ಜನ ಸೇರಿದ್ದರು. ಕಂಟ್ರೋಲ್ ಇದ್ದರೆ ಅಷ್ಟು ಜನಕ್ಕೂ ಅನ್ನಹಾಕುವುದಕ್ಕಾಗುತ್ತಿರಲಿಲ್ಲ. ಸುಮಾರು ಇಪ್ಪತ್ತು ಪಲ್ಲ ಅಡಿಗೆ ಮಾಡಿದ್ದರು. 8000 ಜನಕ್ಕೆ ಕಡಮೆ ಇಲ್ಲದೆ ರಾತ್ರಿ ಎಂಟು ಗಂಟೆಯವರೆಗೂ ಊಟ ಮಾಡಿಕೊಂಡು ಹೋದರು. ನಾವೂ ಅವರಂತೆಯೇ ಸೇವೆ ಮಾಡಿ ಸತ್ತ ಕಾಲದಲ್ಲಿ ಅಷ್ಟು ಜನರು ಸೇರಿದರೆ ನಾವು ಸಂಬಳ ತಗೆದುಕೊಂಡದ್ದು ಸಾರ್ಥಕವಾಯಿತೆನ್ನಬಹುದು; ಇಲ್ಲದಿದ್ದರೆ ಸುಮ್ಮನೆ ಸರ್ಕಾರದ ಸಂಬಳದ ಹಣ ತೆಗೆದುಕೊಂಡು ತಿಂದುಬಿಟ್ಟರು ಎನ್ನಬೇಕಾಗುತ್ತದೆ. ಆದ್ದರಿಂದ ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರು ಮಾಡಿದಂಥ ಕಾರ್ಯಗಳನ್ನು ನೂಡಿ ಒಳ್ಳೆಯ ಹೆಸರನ್ನು ಗಳಿಸರೆಂದು ಎಲ್ಲರಿಗೂ ಹೇಳಿ, ಶ್ರೀಯುತರ ಆತ್ಮಕ್ಕೆ ಸೌಖ್ಯವುಂಟಾಗಲಿ ಎಂದು ದೇವರನ್ನು ಪ್ರಾರ್ಥನೆಮಾಡುತ್ತಾ, ನಾನು ಮುಗಿಸುತ್ತೇನೆ.

ಶ್ರೀ ಟಿ. ಮರಿಯಪ್ಪ (ಮೈಸೂರು).—ಮಾನ್ಯ ಅಧ್ಯಕ್ಷರೇ, ಸಭಾ ನಾಯಕರು ಮತ್ತು ಇತರ ಮಾನ್ಯ ಸದಸ್ಯರು ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ, ಅವರ ಗುಣಗಾನ ಮಾಡಿದ್ದಾರೆ. ಶ್ರೀಯುತರು ರಾಜಕೀಯ ಕ್ಷೇತ್ರದಲ್ಲಿ ವಿಶೇಷವಾದ ಸೇವೆ ಸಲ್ಲಿಸಿದ್ದಾರೆ. ಒಂದಾನೊಂದು ಕಾಲದಲ್ಲಿ ಅವರೂ ನಾವೂ ಒಂದೇ ಪಾರ್ಟಿಯಲ್ಲಿ ಕೆಲಸ ಮಾಡುತ್ತಿದ್ದು, ಭಿನ್ನಾಭಿಪ್ರಾಯಗಳು ಬಂದು ಅವರು ವಿರೋಧ ಪಕ್ಷದಲ್ಲಿದ್ದರೂ ಕೂಡ, ಅವರು ಮಾಡುತ್ತಿದ್ದ ಭಾಷಣವನ್ನು ಈ ಸಭೆಯವರು ಅವಲೋಕಿಸಿದರೆ ಅದೆಷ್ಟು ಗಾಂಭೀರ್ಯದಿಂದ ಕೂಡಿತ್ತೆಂಬುದು ವ್ಯಕ್ತಪಡುತ್ತದೆ. ಸಾಮಾನ್ಯವಾಗಿ ಸಾರ್ವಜನಿಕ ಕೆಲಸಗಳಲ್ಲಿ ಅವರು ಹೆಚ್ಚಿನ ಆಸಕ್ತಿಯಿಂದ ಸೇವೆ ಸಲ್ಲಿಸಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಗೊತ್ತೇ ಇದೆ. ಬಾಕಿ ಜನಾಂಗದ ಅಭಿವೃದ್ಧಿಯ ವಿಚಾರದಲ್ಲಿಯೂ ಅವರು ವಿಶೇಷವಾಗಿ ದುಡಿದಿದ್ದಾರೆ. ಹೀಗೆ ಸಾಮಾಜಿಕ ಮತ್ತು ರಾಜಕೀಯ—ಎರಡು ಕ್ಷೇತ್ರಗಳಲ್ಲೂ ಅವರ ಸೇವೆಯನ್ನು ಎಲ್ಲರೂ ಸ್ಮರಿಸಿಕೊಳ್ಳುವಂತಿದೆಯೆಂದು ಹೇಳಿ ಮಾನ್ಯ ಸಭಾನಾಯಕರು ಸಭೆಯು ಮುಂದಿಟ್ಟಿರುವ ನಿರ್ಣಯವನ್ನು ಸಮರ್ಥಿಸುತ್ತೇನೆ.

ಅಧ್ಯಕ್ಷರು.—ಈ ಸಭೆಯ ಸದಸ್ಯರಾಗಿದ್ದ ಶ್ರೀ ಎಸ್. ಸಿ. ಮಲ್ಲಯ್ಯನವರು ಕಳೆದ ಕಾಲು ಶತಮಾನಗಳಿಂದಲೂ ರಾಜಕೀಯ ರಂಗ, ಶಾಸನ ಸಭೆಗಳು ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಒಂದೇ ಸಮನೆ ದುಡಿದು ಮೈಸೂರು ಜನಾಂಗದಲ್ಲಿ ಪ್ರಖ್ಯಾತರಾಗಿದ್ದರು. ಶಾಸನ ಸಭೆಗಳ ವತ್ತು ಸ್ಥಳೀಯ ಸಂಸ್ಥೆಗಳ ಮೂಲಕ ಸಂಸ್ಥಾನದ ಮತ್ತು ಜನತೆಯ ಸೇವೆಯನ್ನು ಎಷ್ಟು ಕಷ್ಟಗಳು ಬಂದಾಗ್ಯೂ ಹೆದರದೆ ನಿರ್ಭಯವಾದ ಮನಸ್ಸಿನಿಂದ ಮಾಡಿದ್ದಾರೆಂಬುದು ಜನ ಜನಿತವಾಗಿದೆ. ಅದರಲ್ಲೂ ಸಂಸ್ಥಾನದಲ್ಲಿ ಅತ್ಯಧಿಕವಾಗಿ ಜನರು ವಾಸವಾಗಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಅವರು ವಿಶೇಷ ಆಸಕ್ತಿಯುಳ್ಳವರಾಗಿದ್ದರು ಎಂಬುದು ಎಲ್ಲರಿಗೂ ತಿಳಿದಂಥ ವಿಷಯವಾಗಿದೆ. ಇಂಥ ಒಬ್ಬ ಮಹನೀಯರ ಅಕಾಲ ನಿಧನಕ್ಕಾಗಿ ಈ ಸಭೆಯು ತನ್ನ ಅನುತಾಪವನ್ನು ವ್ಯಕ್ತಪಡಿಸುತ್ತದೆ. ಈ ದುಃಖದಲ್ಲಿ ನಾನೂ ಭಾಗಿಯಾಗಿದ್ದೇನೆ.

ಈ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಗೌರವವನ್ನು ಸೂಚಿಸಲು ಸಭೆಯು ಎದ್ದು ನಿಂತು ಎರಡು ನಿಮಿಷ ಕಾಲ ಮೌನದಿಂದಿರಬೇಕೆಂದು ಸೂಚಿಸುತ್ತೇನೆ.

(ಸದಸ್ಯರೆಲ್ಲರೂ ಎದ್ದು ನಿಂತು, ಎರಡು ನಿಮಿಷಗಳ ಕಾಲ ಮೌನದಿಂದಿದ್ದು, ದಿವಂಗತರ ಆತ್ಮಕ್ಕೆ ಗೌರವ ವನ್ನು ಸೂಚಿಸಿದರು.)

(2) The Late Sri Devarakondappa.

ಶ್ರೀ ಕೆ. ಹನುಮಂತಯ್ಯ.—ನಾನು ಸೂಚಿಸುವ ಎರಡನೆಯ ಸಂತಾಪಸೂಚಕ ವಿಷಯವು ಶ್ರೀಮಾರ್ ದೇವರಕೊಂಡಪ್ಪನವರ ಮರಣಕ್ಕೆ ಸಂಬಂಧಪಟ್ಟುದು.

ಸ್ವಾಮಿ, ಶ್ರೀಮಾರ್ ದೇವರ ಕೊಂಡಪ್ಪನವರು ದೈವಾಧೀನರಾಗಿ ಸುಮಾರು ಮೂರು ತಿಂಗಳಾಗು ತ್ತಾ ಬಂದಿತು. ಶ್ರೀಮಾರ್ ದೇವರಕೊಂಡಪ್ಪನವರು ಅನೇಕಲ್ ಊರಿನ ಪೌರಸಭೆಗೆ ಅನೇಕಾವರ್ತಿ ಸದಸ್ಯ ರೂ, ಉಪಾಧ್ಯಕ್ಷರೂ ಮತ್ತು ಅಧ್ಯಕ್ಷರೂ ಆಗಿ ಆ ಊರಿಗೆ ಸೇವೆಯನ್ನು ಸಲ್ಲಿಸಿದರು. ಅವರ ಕಾರ್ಯ ಕ್ಷೇತ್ರ ಅಷ್ಟೇ ಆಗಿರಲಿಲ್ಲ. ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಪ್ರಜಾಪ್ರತಿನಿಧಿ ಸಭೆ ಯಲ್ಲಿ ಅವರ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಯಾರೂ ಮರೆಯುವಂತಿಲ್ಲ. ಅವರ ಧೈರ್ಯ, ಅವರ ಉತ್ಸಾಹ ಮತ್ತು ದೇಶಭಕ್ತಿ ಮತ್ತೊಬ್ಬರಲ್ಲಿ ಅವಕ್ಕಿಂತಲೂ ಮಿಗಿ ಲಾಗಿ ಕಾಣುವುದು ಅಪೂರ್ವ. ಶಾಸನ ಸಭೆ ಮತ್ತು ಪೌರಸಭೆಗಳಲ್ಲದೆ ಇವೆಲ್ಲಕ್ಕೂ ಮಿಗಿಲಾದ ಸೇವೆಯನ್ನು ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಲ್ಲಿಸಿದ್ದಾರೆ. ಈ ದಿವಸ ಈ ಶಾಸನ ಸಭೆಯಲ್ಲಿ ನಾವು ಕುಳಿತು ದೇಶದ ಆಗುಹೋಗುಗಳ ಸಂಪೂರ್ಣ ಸೂತ್ರವನ್ನು ಹಿಡಿದ್ದೇವೆ; ಈ ಪರಿಸ್ಥಿತಿಯನ್ನು ಉಂಟುಮಾಡಲು ಸಹಸ್ರಾರು ಮಂ ದಿ ಕಷ್ಟಪಟ್ಟಿದ್ದಾರೆ, ನಷ್ಟಪಟ್ಟಿದ್ದಾರೆ ಮತ್ತು ಪ್ರಾಣ ಕೊಟ್ಟಿದ್ದಾರೆ. ಈ ವಿಧವಾದ ದೇಶಭಕ್ತರಲ್ಲಿ ಶ್ರೀ ದೇವರಕೊಂಡಪ್ಪನವರು ಅಗ್ರಗಣ್ಯರು. ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕಾವರ್ತಿ ಕಾರಾ ಗೃಹ ವಾಸವನ್ನು ದಿಟ್ಟತನದಿಂದ ಅನುಭವಿಸಿದರು. ಒಂದೆರಡು ಸಾರಿ ಸಂಗ್ರಾಮದ ಪರಿಣಾಮವಾಗಿ ಅವರು ಲಾಠಿ ಏಟು ತಿನ್ನಬೇಕಾಯಿತು. ಅವರು ಸಾಮುಮಾಡಿ ಕುಸ್ತಿಯಲ್ಲಿ ಕೂಡ ಗೆದ್ದಿರತಕ್ಕಂಥವರು ಸಿಂಹದಂಥ ಮನುಷ್ಯರು. ಏಟುಬಿದ್ದಾಗ್ಲೂ ಕೂಡ ಶಾಂತಿ ಸಹನೆಯಿಂದ ವರ್ತಿಸಿಕೊಂಡು, ಅಹಿಂಸಾ ತತ್ವವನ್ನು ಪಾಲಿಸಿಕೊಂಡು ಹೋಗುವ ದೊಡ್ಡ ಮನಸ್ಸು ಅವರದ್ದಾಗಿದ್ದಿತು ಎಂಬುದು ಎಲ್ಲರಿಗೂ ಗೊತ್ತಿದೆ. ಮನುಷ್ಯನ ದೊಡ್ಡಸ್ತಿಕೆಯನ್ನು ನಾವು ಪರೀಕ್ಷಿಸಬೇಕಾದರೆ ಆತನ ಸಾವೇ ಒಂದು ನಿದ ರ್ಶನ ಎಂದು ನಾವು ನಂಬಿಕೊಂಡಿದ್ದೇವೆ. ಅವರು ದೇವಸ್ಥಾನಕ್ಕೆ ಹೋಗಿ ದೇವರ ಪೂಜೆ ಮುಗಿಸಿಕೊಂಡು ಹೊರಗೆ ಬಂದ ತಕ್ಷಣ ಪ್ರಾಣಬಿಟ್ಟರು ಎಂದು ನಾನು ಕೇಳಿದ್ದೇನೆ. ಅಂಥ ನತ್ಪುರುಷರನ್ನೂ ಉಜ್ವಲದೇಶ ಭಕ್ತರನ್ನೂ ಕಳೆದುಕೊಂಡವೆಂದು ನನಗೆ ವ್ಯಸನವಾ ಗುತ್ತದೆ. ಅವರು ನನ್ನ ಸಹೋದ್ಯೋಗಿಗಳಾಗಿ ಕೆಲಸ ಮಾಡಿದ್ದರು. ಯಾವ ಸ್ಫೂರ್ತಿಯಿಂದ ನಾವುಗಳು ಎಲ್ಲರೂ ಈ ದಿವಸ ಕೆಲಸಮಾಡುತ್ತಿದ್ದೇವೆಯೋ, ಆ ಸ್ಫೂರ್ತಿಯನ್ನು ಮತ್ತೊಬ್ಬರಿಗೆ ಕೊಡತಕ್ಕ ಶಕ್ತಿ ದೇವರಕೊಂಡಪ್ಪನವರಿಗೆ ಇತ್ತು. ಅವರ ನಾದ ಸಿಂಹನಾದ, ಅವರ ಕೆಚ್ಚೆದೆ ಸಿಂಹದ ಎದೆ ಆಗಿತ್ತು. ಅವರದು ನಿಸ್ವಾರ್ಥ ಸೇವೆ. ಅವರ ಮನೆಗೆ ಹೋಗಿ ನೋಡಿದರೂ ಕೂಡ, ಬಡತನ ಬೀಡುಮಾಡಿಕೊಂಡಿ ರುವ ಹಾಗೆ ಕಾಣುತ್ತಿತ್ತು. ಅಂಥ ಮಹನೀಯರನ್ನು ನಾವು ಕಳೆದುಕೊಂಡು ದುಃಖಕ್ಕೆ ಈಡಾಗಿರುವುದು ಆ ಶ್ಚರ್ಯವಲ್ಲ. ದೇವರು ಅವರ ಆತ್ಮಕ್ಕೆ ಸದ್ಗತಿಯನ್ನು ಕೊಡಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಜನಾಬ್ ಜೆ. ಮಹಮ್ಮದ್ ಇಮಾಂ.—ಸಭಾ ನಾಯಕರು ದಿವಂಗತ ಶ್ರೀ ದೇವರಕೊಂಡಪ್ಪನವರ ವಿಷಯವಾಗಿ ಹೇಳಿರುವ ಎಲ್ಲಾ ಅಂಶಗಳನ್ನೂ ಪುಷ್ಟೀ ಕರಿಸುತ್ತಾ, ಈ ಸಭೆಯಪರವಾಗಿ ನನ್ನ ದುಃಖವನ್ನು ಸೂಚಿಸುತ್ತೇನೆ. ಶ್ರೀಮಾರ್ ದೇವರಕೊಂಡಪ್ಪನವರೂ ಮತ್ತು ನಾನೂ ಒಂದೇ ಪಾರ್ಟಿಗೆ ಸೇರದೆ ಇದ್ದರೂ, ಅವರು ನಾನು ಅಧಿಕಾರದಲ್ಲಿದ್ದಾಗ, ನನ್ನಲ್ಲಿ ಬಹಳ ವಿಶ್ವಾಸವಿಟ್ಟು, ಅವರ ತಾಲ್ಲೂಕಿನ ಸೇವೆಮಾಡುವ ಉದ್ದೇಶದಿಂದ ಯಾವಾಗಲೂ ನನ್ನಲ್ಲಿ ಬರುತ್ತಿದ್ದರು. ಅವರು ಬೇರೆ ಪಾರ್ಟಿಗೆ ಸೇರಿದ್ದರೂ ಸಹ, ಅವರಿಗೆ ರಾಜಕೀಯದಲ್ಲಿ ಇದ್ದಂಥ ಆಸಕ್ತಿ, ಸೇವೆಮಾಡಲು ಅವರಿಗೆ ಇದ್ದ ಆಕಾಂಕ್ಷೆ, ಇವನ್ನೆಲ್ಲಾ ನೋಡಿ, ಅವರ ಮೇಲೆ ನನಗೆ ಬಹಳ ಅಭಿಮಾನವಿದ್ದಿತು. ಎಲ್ಲ ದಕ್ಕಿಂತಲೂ ಹೆಚ್ಚಾಗಿ, ಅವರ ಗರ್ಜನೆ, ಅವರ ವಾಣಿ, ಇವನ್ನು ಯಾರೂ ಮಾರಿಸುವ ಹಾಗಿರಲಿ. ಅವರು ಯಾವಾಗಲೂ ದೊಡ್ಡ ಧ್ವನಿಯಿಂದ ಬೇಕಾದಷ್ಟು ವಿಷಯಗಳನ್ನು ಹೇಳುತ್ತಿದ್ದರು. ನಾನು ಹಾನ್ಯ ಕ್ಕಾಗಿ "ದೇವರಕೊಂಡಪ್ಪನವರೇ ನೀವು ದೇವರನ್ನೇ ಕೊಂಡುಬಿಟ್ಟಿದ್ದೀರಿ, ಇವೆಲ್ಲಾ ನಿಮಗೆ ಯಾತಕ್ಕೆ, ದೇವರೇ ನಿಮಗೆ ಸಹಾಯ ಮಾಡುತ್ತಾರೆ." ಎಂದು ಹೇಳುತ್ತಿದ್ದೆ. ಅವರು ರಾಜಕೀಯದಲ್ಲಷ್ಟೆಯೂ ಅವರ ತಾಲ್ಲೂಕಿಗೂ ಮತ್ತು ದೇಶಕ್ಕೂ ಅಪಾರವಾದ ಸೇವೆ ಯನ್ನು ಸಲ್ಲಿಸಿದ್ದಾರೆ. ಅವರ ಅಕಾಲ ನಿಧನದಿಂದ ನಮಗೆಲ್ಲರಿಗೂ ಬಹಳ ದುಃಖವಾಗಿದೆ. ನಾನು ದೇವರ ಕೊಂಡಪ್ಪನವರ ಬಂಧುವರ್ಗದವರಿಗೆ ನನ್ನ ಅನುತಾ ಪವನ್ನು ಬಹಳ ದುಃಖದಿಂದ ಸೂಚಿಸುತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ-ಆನೇಕಲ್).—ಸ್ವಾಮಿ, ಸಭಾನಾಯಕರು ಮತ್ತು ಪ್ರತಿ ಪಕ್ಷದ ನಾಯಕರು ಕೀರ್ತಿಶೇಷ ದೇವರಕೊಂಡಪ್ಪನವರ ಬಗ್ಗೆ ಆಡಿದ ಪ್ರಶಂಸೆಯನ್ನು ನಾನು ಅನುಮೋದಿಸು ತ್ತೇನೆ. ಅನೇಕಲ್ಲು ತಾಲ್ಲೂಕಿನಲ್ಲಿ ವೀರಕೆಚ್ಚೆದೆಯ ಗಂಡಾ ಳೆಂದರೆ ದೇವರಕೊಂಡಪ್ಪನವರು. ಅವರ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಪ್ರಜಾಪ್ರತಿನಿಧಿ ಸಭೆಯಲ್ಲಿ ಸಾಮಾನ್ಯ ರೈತರ ಬಗ್ಗೆ, ಕೂಲಿ ಕಾರ್ಮಿಕರ ಬಗ್ಗೆ, ಅದರಲ್ಲಿಯೂ ವಿಶೇಷವಾಗಿ ಕೈಮಗ್ಗದವರ ಬಗ್ಗೆ ಇರುವ ಎಲ್ಲಾ ಕುಂದುಕೊರತೆಗಳನ್ನೂ ಸಿಂಹವಾಣಿಯಿಂದ ಮಂಡಿಸುತ್ತಿದ್ದರು. ಅವರ ಭಾಷಣ ಮತ್ತು ಅವರ ಧ್ವನಿಯ ಭರ್ಜರಿಯಿಂದ ಪ್ರತಿಯೊಬ್ಬರೂ ಅವರ ವಾದ ವನ್ನು ಒಪ್ಪುವಂತೆ ಮಾಡುತ್ತಿದ್ದರು. ಅಂಥವರನ್ನು ಆ ಊರಿನವರು ಕಳೆದುಕೊಂಡಿರುವುದು ನಿಜವಾಗಿಯೂ ಅವರ ದೊಡ್ಡ ದೌರ್ಭಾಗ್ಯವೇ ಸರಿ. ಅವರ ಶವ ಸಂಸ್ಕಾರದ ದಿನ ನಾನು ಅಲ್ಲಿ ಹಾಜರಿದ್ದೆ, ಒಂದು ಒಂದೂವರೆ ಮೈಲಿಯವರೆಗೂ ದೇವರಕೊಂಡಪ್ಪನವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಜನರು ನೆರೆದಿದ್ದರು. ಸಾಮಾನ್ಯ ರೈತನ ಕುಟುಂಬದಲ್ಲಿ ಜನಿಸಿದ ದೇವರ ಕೊಂಡಪ್ಪನವರ ಹಿಂದೆ ಅನೇಕಲ್ಲು ತಾಲ್ಲೂಕಿನ ಎಲ್ಲಾ ಜನರೂ ಗಂಡಸರೂ, ಹೆಂಗಸರೂ ಮತ್ತು ಮಕ್ಕಳೂ ಅಳಿಯಾಗಿ ಕಣ್ಣೀರು ಸುರಿಸುತ್ತಾ, ಏಂದು ಗೋಳಿಡುತ್ತಿ ದ್ದರು. ಅವರ ನಿಧನದಿಂದ ಕೈಮಗ್ಗದವರಿಗೆ ವಿಶೇಷ ವಾದ ಮತ್ತು ಅಪಾರವಾದ ನಷ್ಟ ಉಂಟಾಗಿದೆ. ಈ ಸಂದರ್ಭದಲ್ಲಿ ದೇವರಕೊಂಡಪ್ಪನವರ ಆತ್ಮಕ್ಕೆ ದೇವರು ಶಾಂತಿಯನ್ನು ಉಂಟುಮಾಡಲೆಂದೂ, ಅವರ ಕುಟುಂಬ ವರ್ಗದವರಿಗೆ ಈ ಅಪಾರವಾದ ದುಃಖವನ್ನು ಸಹಿಸುವ

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ).

ಶಕ್ತಿಯನ್ನು ಭಗವಂತನು ಕರುಣಿಸಲೆಂದೂ ನಾನು ನನ್ನ ಅನುತಾಪವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಶ್ರೀ ದೇವರ ಕೊಂಡಪ್ಪನವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇವೆ ಮಾಡಿರುವುದನ್ನು ನಭಾನಾಯಕರು ಆಗಾಗಲೇ ತಿಳಿಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನತೆ ಭಾಗವಹಿಸಿದ್ದ ಕಾಲಕ್ಕೆ ಕಾಂಗ್ರೆಸ್ ಬಹಳ ಶಕ್ತಿಯುತವಾಗಿತ್ತು ಎಂದು ಹೇಳಬಹುದು. ಆ ಕಾಲದಲ್ಲಿ ದೇವರ ಕೊಂಡಪ್ಪನವರಂಥ ರಾಷ್ಟ್ರಭಕ್ತರು ಮಾತ್ರವಲ್ಲದೆ ಇನ್ನೂ ಎಷ್ಟೋ ಜನ ಭಾಗವಹಿಸಿದ್ದರು. ಆದರೆ ಕಾಂಗ್ರೆಸ್ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗ ದೇವರ ಕೊಂಡಪ್ಪನವರು ನಲ್ಲಿಸಿದ ದೇಶಸೇವೆಯ ವಿಷಯವಾಗಿ ಒಂದು ಅಂಶವನ್ನು ಹೇಳುತ್ತೇನೆ. 1937ನೇ ಇಸವಿಯಲ್ಲಿ ಕಾಂಗ್ರೆಸ್‌ಪ್ರಚಾರಕ್ಕಾಗಿ ನೇಮಕವಾಗಿದ್ದ ನಾನು ನಂಸ್ಥಾನಾದಳಿ ಎಲ್ಲ ತಾಲ್ಲೂಕುಗಳಲ್ಲೂ ಸಂಚರಿಸಿ ಪ್ರತಿ ತಾಲ್ಲೂಕಿನ ಅನೇಕ ಹಳ್ಳಿಗಳಿಗೂ ಹೋಗಿ ಕಾಂಗ್ರೆಸ್ ಪ್ರಚಾರ ಮಾಡಿದೆ. ಆ ಕಾಲದಲ್ಲಿ ಅನೇಕ ಪಟ್ಟಣಗಳಲ್ಲಿಯೂ ನಹ, ಹಳ್ಳಿಗಳಲ್ಲಿ ಮಾತ್ರವೇ ಅಲ್ಲ, ಕಾಂಗ್ರೆಸ್ ಸಭೆಗೆ ಬರಬೇಕೆಂದರೆ, ಜನ ಬಹಳ ಹೆದರುತ್ತಿದ್ದರು. ಆಗಿನ ನರ್ಕಾರದ ಭಯದಿಂದ, ಕಾಂಗ್ರೆಸ್ ಸಭೆಗೆ ಬರುವುದಕ್ಕಾಗಲಿ, ಕಾಂಗ್ರೆಸ್‌ನವರ ಮಾತಿಗೆ ಬೆಲೆಕೊಡುವುದಕ್ಕಾಗಲಿ ಜನರಲ್ಲಿ ಧೈರ್ಯವಿರುತ್ತಿರಲಿಲ್ಲ. ಒಂದು ಪ್ರಸಂಗ ಅನೇಕಲ್ಲು ತಾಲ್ಲೂಕಿಗೆ ಹೋದಾಗ ನಡೆಯಿತು. ನಾನು ಅನೇಕಲ್ಲಿನಲ್ಲಿ ಸಭೆ ಏರ್ಪಾಡು ಮಾಡಬೇಕೆಂದು ಹಸ್ತಪತ್ರಿಕೆಗಳನ್ನು ಹಂಚಿ ಹೋದರೆ, ಆ ಊರಿನ ಮುಂದೆ, ನನಗಾಗಿ ಕಾದಿದ್ದವರು ದೇವರಕೊಂಡಪ್ಪನವರೊಬ್ಬರೇ. ನಾನು ಮತ್ತು ನನ್ನ ಜೊತೆಯಲ್ಲಿದ್ದ ಕೆಲವರು, ಅಷ್ಟೇ ಜನ ಹೊರತು ಇನ್ನೊಬ್ಬರೂ ಭಾಷಣ ಕೇಳುವುದಕ್ಕೆ ಬಂದಿರಲಿಲ್ಲ. ಯಾರನ್ನು ಕುರಿತು ಭಾಷಮಾಡಬೇಕು ಎಂದು ನನಗೆ ಹೆಚ್ಚು ಆಯಿತು. ದೇವರ ಕೊಂಡಪ್ಪವರು ನನ್ನನ್ನು ಕರೆದುಕೊಂಡು ಜೈಕಾರ ಹಾಡುತ್ತಾ ಅನೇಕಲ್ಲು ಪಟ್ಟಣದ ಬೀದಿಗಳಲ್ಲಿ ಹೋಗಿ, ಅಂಗಡಿ ಬೀದಿಗಳಲ್ಲಿ ಕೂತಿದ್ದ 20 ಜನರನ್ನು ಕರೆದುಕೊಂಡು ಬಂದರು. ನಾನು ಭಾಷಣ ಪ್ರಾರಂಭವಾಡಿದ ಮೇಲೆ ನೂರಾರು ಜನರು ಬಂದು ಸೇರಿದರು. ಯಾವ ಕಾಲದಲ್ಲಿ ಸಭೆಗೇ ಬರಲು ಜನರು ಹೆದರುತ್ತಿದ್ದರೋ ಅಂಥಕಾಲದಲ್ಲಿ ಕಾಂಗ್ರೆಸ್ಸಿಗೆ ಉತ್ತೇಜನ ಕೊಟ್ಟು, ಕಾಂಗ್ರೆಸ್ ಸಂಸ್ಥೆಗೆ ಬೆಂಬಲ ಕೊಟ್ಟು ಸಾಯುವ ತನಕ ಕಾಂಗ್ರೆಸ್ಸಿಗೆ ಸೇವೆಮಾಡಿ, ದೇಶಕ್ಕೇ ಅಪಾರವಾದ ಸೇವೆ ಮಾಡಿದ್ದಾರೆ. ದೇವರ ಕೊಂಡಪ್ಪನವರು. ಇಂಥ ವ್ಯಕ್ತಿ ಇವೊತ್ತಿನದಿನ ನಮ್ಮಿಂದ ಮರೆಯಾಗಿರುವುದು ನಮಗೆಲ್ಲರಿಗೂ ವ್ಯಸನಕರವಾದ ವಿಚಾರ. ಆದ್ದರಿಂದ ನಮ್ಮ ನಭಾನಾಯಕರು ಹೇಳಿದ ಅಂಶವನ್ನು ಅನುಮೋದಿಸಿ, ದೇವರಕೊಂಡಪ್ಪನವರ ಕುಟುಂಬಪರಿವಾರದವರಿಗೆ ಈ ಸಭೆಯ ಅನುತಾಪವನ್ನು ತಾವು ಕಳುಹಿಸಬೇಕು ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಎ. ಎ. ನರಸಿಂಹರೆಡ್ಡಿ (ಬೆಂಗಳೂರು-ದಕ್ಷಿಣ).—ಅಧ್ಯಕ್ಷರೆ, ಈಗಾಗಲೇ ಹಲವು ಮಿತ್ರರು ದೇವರ ಕೊಂಡಪ್ಪನವರ ರಾಜಕೀಯ ಮತ್ತು ಸಾರ್ವಜನಿಕ ಜೀವನದ ವಿಷಯದಲ್ಲಿ ಹೇಳಿದ್ದಾರೆ. ಅವರು ನಮ್ಮ ಪಕ್ಕದ ತಾಲ್ಲೂಕಿನವರು; ನಾನು ಅವರ ಸಂಪರ್ಕವನ್ನು ಹತ್ತುಹನ್ನೆರಡು ವರ್ಷಗಳಿಂದ ಇಟ್ಟುಕೊಂಡಿದ್ದೆ. ಅವರು ಕೇವಲ ತಾತ್ಕಾಲಿಕ ಪ್ರಯೋಜನವುಳ್ಳ ಯೋಜನೆಗಳನ್ನು ಟ್ಟುಕೊಂಡಿದ್ದವರಲ್ಲ. ದೇಶಕ್ಕೆ ಸ್ವಾತಂತ್ರ್ಯವನ್ನುಗಳಿಸಬೇಕೆಂಬ ವಿಶಾಲ ದೃಷ್ಟಿಯಿಂದ ಬಹಳ ಶ್ರದ್ಧಾಸಕ್ತಿಗಳಿಂದ ಕೆಲಸ ಮಾಡಿದರು. ದೇಶವನ್ನು ಕಟ್ಟುವುದಕ್ಕೆ ಬೇಕಾದಷ್ಟು ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಹೆಚ್ಚು ಹೆಚ್ಚು ಜನರನ್ನು ಪಕ್ಷಕ್ಕೆ ಸೇರಿಸಬೇಕೆಂದು ಎಲ್ಲರಿಗೂ ಪ್ರೋತ್ಸಾಹ ಕೊಡುತ್ತಿದ್ದರು. ಅವರ ನಾಯಕತ್ವದಲ್ಲಿ ಅವರ ಸಮಾಲೋಚನೆಯನ್ನು ನಾನು ಅನೇಕಸಾರಿ ಪಡೆದಿದ್ದೇನೆ. ಅವರು ನಿಜವಾದ ಹಿರಿಯ ದೇಶ ಭಕ್ತಿಯಿಂದ ಕೂಡಿದ ವ್ಯಕ್ತಿಗಳು. ಅಷ್ಟೊಂದು ಹೆಚ್ಚಿನ ವಿದ್ಯಾವಂತರಲ್ಲದಿದ್ದರೂ ಎಷ್ಟೋ ವಿದ್ಯಾವಂತರಿಗಿಂತ ಮಿಗಿಲಾಗಿ ದೇಶದ ಸಮಸ್ಯೆಗಳನ್ನು ಯೋಚನೆಮಾಡಿ ಪರಿಹಾರ ಹೇಳುತ್ತಿದ್ದರು. ಇಂಥಾ ಒಳ್ಳೆಯ ವ್ಯಕ್ತಿ ಹೀಗೆ ನಮ್ಮನ್ನು ಬಿಟ್ಟು ಹೋಗಿರುವುದರಿಂದ ನಮ್ಮಂಥ ಯುವಕರಿಗೆ ಪ್ರೋತ್ಸಾಹ ಕೊಡುವವರಿಲ್ಲದಂತಾಗಿದೆ. ಈ ಸಮಯದಲ್ಲಿ ಅವರ ನಾಯಕತ್ವ, ಅವರು ಯುವಕರಿಗೆ ಕೊಡುತ್ತಿದ್ದ ಪ್ರೋತ್ಸಾಹ ಈ ಸದ್ಗುಣಗಳನ್ನು ನಾನು ನೆನೆದುಕೊಂಡು ಅವರ ಕುಟುಂಬ ವರ್ಗದವರಿಗೆ ನನ್ನ ಸಂತಾಪವನ್ನು ಸೂಚಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ದಿವಂಗತ ದೇವರ ಕೊಂಡಪ್ಪನವರ ವಿಚಾರದಲ್ಲಿ ಅನೇಕ ಸ್ನೇಹಿತರೂ ಮತ್ತು ನಮ್ಮ ಮಿತ್ರರಾದ ಶ್ರೀಮಾನ್ ಇಮಾಂರವರೂ ವಿಶದವಾಗಿ ಹೇಳಿದ್ದಾರೆ. ದೇವರ ಕೊಂಡಪ್ಪನವರು ಸುಮಾರು ಹದಿನೈದು ಇಪ್ಪತ್ತು ವರ್ಷಗಳಕಾಲ ದೇಶಕ್ಕಾಗಿ ದುಡಿದು ಸಲ್ಲಿಸಿರತಕ್ಕ ಸೇವೆ ಬಹಳ ಅನೋಘವಾಬುದು. ಅದರಲ್ಲಿಯೂ ಅವರು ಮಾತನಾಡಬೇಕಾದರೆ ಲೌಡ್ ಸ್ಪೀಕರೇ ಬೇಕಾಗಿರಲಿಲ್ಲ. ಬಹಳ ಘರ್ಜನೆಯ ಮನುಷ್ಯ, ಹುಲಿಯಂಥಾ ಮನುಷ್ಯ ಅವರು ಅನೇಕ ಸಾರಿ ಕಾಂಗ್ರೆಸ್ ಪಾರ್ಟಿ ಸಭೆ, ಎಂ. ಪಿ. ಸಿ. ಸಿ, ಎ. ಐ. ಸಿ. ಸಿ. ಮುಂತಾದ ಕಡೆ ಮಾತನಾಡಬೇಕಾಗಿದ್ದಾಗ ಅವರಿಗೆ ಲೌಡ್ ಸ್ಪೀಕರನ್ನೇ ಕೊಡುತ್ತಿರಲಿಲ್ಲ. ಕೊಟ್ಟರೆ ಎಲ್ಲಿ ಅದು ಓಡೆದು ಹೋಗುತ್ತಿತ್ತೋ ಎಂಬ ಭಾವನೆಯಿರುತ್ತಿತ್ತು. ಅಷ್ಟು ಧೈರ್ಯವಾಗಿ, ಧೀರ ಸ್ವರದಿಂದ ಮಾತನಾಡುತ್ತಿದ್ದ ಮನುಷ್ಯ ಅವರು. ಅವರು ಕಾಂಗ್ರೆಸ್ ಪಕ್ಷಕ್ಕೆ ಸದಸ್ಯರಾಗಿ ದೇಶಕ್ಕೆ ಅಪಾರವಾದ ತ್ಯಾಗ ಮತ್ತು ಸೇವೆಯನ್ನು ನಲ್ಲಿಸಿದ್ದಾರೆ. ಅವರು ಬಡವರಾಗಿದ್ದರೂ ಕೂಡ ತಮ್ಮ ಸುಖದ ಕಡೆ, ತಮ್ಮ ಸ್ವಾರ್ಥದ ಕಡೆ ಗಮನವಿಡದೆ ದೇಶದಲ್ಲಿ ಅದರಲ್ಲಿಯೂ ಹಳ್ಳಿಗಳಲ್ಲಿ ವಾಸ ಮಾಡುವ ಜನರ ಜೀವನವನ್ನು ಉತ್ತಮಪಡಿಸಬೇಕೆಂಬ ತೀವ್ರಾ ಸಕ್ತಿಯಿಂದ ದುಡಿಯುತ್ತಿದ್ದರು. ಕಾಂಗ್ರೆಸ್ ಪಾರ್ಟಿಯ ಸಭೆಯಲ್ಲಾಗಲಿ ಯಾವ ಸಭೆಯಲ್ಲಾಗಲಿ ಭರ್ಜರಿಯಾಗಿ ಘರ್ಜನೆಯಿಂದ ನಿಷ್ಕಲ್ಮಷವಾದ ಮನಸ್ಸಿನಿಂದ ಧೈರ್ಯವಾಗಿ ಮಾತನಾಡಿ, ಕೆಲಸಮಾಡಿ ದೇಶಕ್ಕಾಗಿ ದುಡಿಯುತ್ತಿದ್ದ ಮನುಷ್ಯ ಅವರು. ದೇಶ ಸೇವೆಯ ವಿಷಯದಲ್ಲಿ ಅವರು ಮಾಡಿರತಕ್ಕ ತ್ಯಾಗ ಮತ್ತು ನಿಷ್ಕಾಮ ಸೇವೆಯನ್ನು ನೋಡಿದರೆ, ದೇವರಕೊಂಡಪ್ಪನವರಿಗೆ ದೇಶ ಭಕ್ತರಲ್ಲಿ ಮೊದಲನೆಯ ಸ್ಥಾನ ನಲ್ಲಿತಕ್ಕದೆಂದು ಹೇಳಿದರೆ ತಪ್ಪಲ್ಲ. ಅಂಥಾ ಮಹನೀಯರು ಕಣ್ಮರೆಯಾಗಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ನೀಡಿ. ಅವರ ಸಂಸಾರಕ್ಕೆ ಈ ದುಃಖವನ್ನು ಸಹಿಸಲು ಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸಿ ನನ್ನ ಸಂತಾಪವನ್ನು ಸೂಚಿಸುತ್ತೇನೆ.

1-30 P.M.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀಮಾನ್ ದೇವರ ಕೊಂಡಪ್ಪನವರನ್ನು 1932ನೆಯ ಸಾಲಿನಿಂದ

ಲೂ ನಾನು ಬಲ್ಲವನು. ಅತ್ತಿಬೆಲೆ ಮತ್ತು ನರ್ಜಾಪುರ ಈ ಸ್ಥಳಗಳಿಗೆ ನಾನು ಕಾಂಗ್ರೆಸ್ ಪ್ರಚಾರಮಾಡುವುದಕ್ಕೆ ಹೋಗಿದ್ದೆ. ಆ ಕಾಲದಲ್ಲಿ ನನಗೆ ಯಾರೂ ಬೆಂಬಲ ಕೊಡಲಿಲ್ಲ. ಆಂಥಾ ಕಾಲದಲ್ಲಿ ಶ್ರೀಮಾನ್ ದೇವರ ಕೊಂಡಪ್ಪನವರು ಅತ್ತಿಬೆಲೆಗೆ ಬಂದು ನನ್ನ ಜೊತೆಗೆ ಸೇರಿ, ಕಾಂಗ್ರೆಸ್ಸಿಗೆ ಹೆಚ್ಚು ಬೆಂಬಲ ಕೊಡಬೇಕೆಂದು ಹೇಳಿ, ಹಳ್ಳಿ ಹಳ್ಳಿಗಳಿಗೆ ತಿರುಗಿ ಕಾಂಗ್ರೆಸ್ಸಿನ ನೀತಿ ಧರ್ಮಗಳನ್ನು ಎತ್ತಿ ಹಿಡಿದರು, ನನ್ನ ಜೊತೆಗೆ ಬಂದು. ಇವರು ಹೆಚ್ಚಿನ ವಿದ್ಯಾವಂತರಲ್ಲದಿದ್ದರೂ ಕೂಡ ರಾಜಕೀಯದಲ್ಲಿ ಅರಿತು ನುರಿತವರಾಗಿದ್ದರು. ಅನೇಕ ಸಂದರ್ಭಗಳಲ್ಲಿ ತಮ್ಮ ಬುದ್ಧಿ ಸಾಹಸವನ್ನು ತೋರಿಸಿ ಅನೇಕರನ್ನು ನಮ್ಮ ಕಡೆಗೆ ಬರುವಂತೆ ಮಾಡಿದರು. ಶ್ರೀಮಾನ್ ಚೆಂಗಲರಾಯರೆಡ್ಡಿಯವರು, ಶ್ರೀಮಾನ್ ಕೆ. ಹನುಮಂತಯ್ಯನವರು ಮತ್ತು ನಾವೆಲ್ಲ ಅನೇಕ ಕಲ್ಲಿಗೆ ಹೋದಾಗ ಅಲ್ಲಿನ ಜನರಿಗೆ ಪ್ರೋತ್ಸಾಹಕೊಟ್ಟು ಸಾವಿರಾರು ಜನರು ಕೂಡುವಂತೆ ಮಾಡಿ, ನಮ್ಮೆಲ್ಲರನ್ನೂ ಗಾಡಿ ಮೇಲೆ ಕೂರಿಸಿ ಉತ್ಸವ ಮಾಡಿದಾಗ, ಕೆಲವರು ಕಣ್ಣು ಕೆಂಪಗೆ ಮಾಡಿಕೊಳ್ಳಲು, ಅವರನ್ನು ಎದಿರಿಸಿದರು. ನಾನು ಮಾಡುವುದು ನ್ಯಾಯ, ಧರ್ಮ; ರಾಜಕೀಯ ಹೋರಾಟ ತಪ್ಪಲ್ಲ, ಸತ್ಯಕ್ಕಾಗಿ ಹೋರಾಡುತ್ತಿದ್ದೇನೆ, ಸತ್ಯಮಾರ್ಗದಲ್ಲಿ ಹೋಗುತ್ತಿದ್ದೇನೆ ಎಂದು ಧೈರ್ಯವಾಗಿ ಹೇಳಿದರು. ಆ ಸಂದರ್ಭದಲ್ಲಿ ಎತ್ತುಗಳನ್ನು ಕಟ್ಟುವುದಕ್ಕೆ ಕೆಲವರು ಮುಂದೆ ಬರಲಿಲ್ಲ. ಆಗ ನಾನೇ ನೊಗವನ್ನು ಹಿಡಿದುಕೊಂಡು ಗಾಡಿ ಎಳೆದುಕೊಂಡು ಹೋಗುತ್ತೇನೆ ಎಂದು ಹೇಳಿದರು. ಅಂಥಾ ವ್ಯಕ್ತಿಗಳು ಕಣ್ಮರೆಯಾಗಿರುವುದಕ್ಕಾಗಿ ನಮ್ಮೆಲ್ಲರಿಗೂ ಸಂಕಟವಾಗುತ್ತಿದೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಮತ್ತು ಈ ಅಪಾರ ದುಃಖವನ್ನು ಸಹಿಸಲು ಅವರ ಕುಟುಂಬಕ್ಕೆ ಶಕ್ತಿಯನ್ನು ಕರುಣಿಸಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ವಿ. ರಾಮರಾವ್ (ತುಮಕೂರು).—ಸ್ವಾಮಿ, ದಿವಂಗತರಾದ ದೇವರಕೊಂಡಪ್ಪನವರ ವಿಷಯದಲ್ಲಿ ಇದುವರೆಗೆ ಮಾನ್ಯ ಸದಸ್ಯರು ಹೇಳಿರುವ ಮಾತುಗಳನ್ನು ಕೇಳಿದ್ದೇನೆ. ನಾನು ಹೆಚ್ಚು ಹೇಳುವುದಕ್ಕೆ ಹೋಗದೆ, ಉಳಿದಿರುವ ಒಂದೇ ಒಂದು ವಿಷಯವನ್ನು ಹೇಳಲು ನಿಂತಿದ್ದೇನೆ. 1942ನೆಯ ಇಸವಿಯಲ್ಲಿ ಸೆಂಟ್ರಲ್ ಜೈಲಿನಲ್ಲಿ ನಾವೆಲ್ಲ ಕಾರಾಗೃಹವಾಸದಲ್ಲಿದ್ದ ಸಮಯದಲ್ಲಿ, ಜೈಲಿನ ಕೆಲವು ಅಧಿಕಾರಿಗಳ ಆಚಾತುರ್ಯದಿಂದ ಲಾರಿ ಧಾರ್ಜಾಯಿತು. ಆ ದಿವಸ ಬೆಳಿಗ್ಗೆ ಆರು ಘಂಟೆಯಾಗಿತ್ತು. ದೇವರ ಕೊಂಡಪ್ಪನವರು ನೀರಿನ ತೊಟ್ಟಿಯ ಬಳಿ ಆಗ ಸ್ನಾನ ಮಾಡುತ್ತಿದ್ದರು. ಅವರನ್ನು ನೋಡಿದ್ದವರಿಗೆಲ್ಲಾ ಗೊತ್ತಿರುವ ಹಾಗೆ, ಅವರು ಗರಿಷಾಧನೆ ಮಾಡಿ ಒಳ್ಳೆಯ ದೇಹ ದಾರ್ಢ್ಯ ಪಡೆದಿದ್ದರು. ಗಲಭೆ ನಡೆದ ಜಾಗಕ್ಕೂ ಅವರು ಸ್ನಾನ ಮಾಡುತ್ತಿದ್ದ ಜಾಗಕ್ಕೂ ನುಮಾರು ಒಂದು ಒಂದೂವರೆ ಫರ್ಲಾಂಗ್ ದೂರವಿತ್ತು. ಅವರ ಮೇಲೆ ಏನೂ ಅಸಮಾಧಾನವಿತ್ತೋ ಏನೋ, ಆ ಗಲಭೆ ನಡೆಯುತ್ತಿದ್ದ ಸ್ಥಳದಿಂದ ಅಧಿಕಾರಿಗಳು ಬಂದು ಸ್ನಾನ ಮಾಡುತ್ತಿದ್ದ ದೇವರ ಕೊಂಡಪ್ಪನವರ ಬೆನ್ನಿನ ಮೇಲೆ ದೊಣ್ಣೆಯಿಂದ ಎರಡು ಬಲವಾದ ಏಟುಗಳನ್ನು ಕೊಟ್ಟರು. ನನ್ನಂಥವನಿಗೆ ಅಂಥಾ ಏಟು ಬಿದ್ದಿದ್ದರೆ ನಾನು ನೆತ್ತೇ ಹೋಗುತ್ತಿದ್ದೆ. ಈ ಲೌಡ್ ಸ್ಪೀಕರಿನ ಕಂಟದಷ್ಟು ದಪ್ಪ ಬಾಸುಂಡೆ ಅವರ ಬೆನ್ನ ಮೇಲೆ ಊದಿಕೊಂಡು ಒಂದೆರಡು ದಿವಸಗಳವರೆಗೂ ಎದ್ದು ಕಾಣುತ್ತಿತ್ತು. ಆದರೂ ಕೂಡ ದೇವರಕೊಂಡಪ್ಪನವರು ತಮಗಾದ ನೋವನ್ನು ಮತ್ತೊಬ್ಬರಲ್ಲಿ ಹೇಳಿಕೊಳ್ಳಲಿಲ್ಲ. ಮಕ್ಕಳಿಗೆ ಬಿದ್ದ ಏಟಿಗಾಗಿ ಮರುಗುತ್ತಾ ಅವರ ಸಮಾಧಾನಮಾಡುವುದಕ್ಕೆ, ಅವರ ಶುಶ್ರೂಷೆ ಮಾಡುವುದಕ್ಕೆ ತೊಡಗಿದರು. ಅವರು ಗಟ್ಟಿಯಾಗಿ ಮಾತನಾಡುತ್ತಿದ್ದವರಷ್ಟೇ ಅಲ್ಲದೆ, ಅಷ್ಟೇ ದೇಹ ದಾರ್ಢ್ಯ ಮನೋ ದಾರ್ಢ್ಯ ಉಳ್ಳವರಾಗಿದ್ದರು. ಎಲ್ಲ ಅನ್ಯಾಯವನ್ನು ಕಂಡರೂ ಅದನ್ನು ಪ್ರತಿಭಟಿಸುತ್ತಿದ್ದರು. ಇಂಥ ಧೀರರನ್ನು ಕಳೆದುಕೊಂಡ ನಾವು ಎಷ್ಟು ಸಂಕಟಪಟ್ಟರೂ ಸಾಲದು. ಅವರು ತಮ್ಮ ಸಂಸಾರವನ್ನು ಬಡತನದಲ್ಲಿ ಬಿಟ್ಟುಹೋಗಿದ್ದಾರೆ. ಇಂಥಾ ನಿಸ್ವಾರ್ಥ ಸೇವೆ ಮಾಡಿದ ವರನ್ನು ನೆನೆಸಿಕೊಂಡು ಕಣ್ಣೀರಿಡಬೇಕಾಗಿದೆ. ನಮ್ಮ ಈ ಸಭೆಯ ಅನುತಾಪವನ್ನು ಅವರ ಕುಟುಂಬದವರಿಗೆ ತಿಳಿಸಬೇಕೆಂದು ಸಭೆಯ ಪರವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ದಿವಂಗತ ದೇವರ ಕೊಂಡಪ್ಪನವರು ಅಪಾರವಾದ ದೇಶ ಮತ್ತು ದೇಶದ ಜನತೆಯ ಸೇವೆಯನ್ನು ಮಾಡಿ ಕೀರ್ತಿ ಶೇಷರಾಗಿದ್ದಾರೆ. ಇದರಿಂದ ಅವರು ನಿಜವಾಗಿಯೂ ಚಿರಸ್ಮರಣೀಯರು. ಸಭೆ ನಲ್ಲಿರುವ ಈ ಸಂತಾಪ ಸೂಚನೆಯಲ್ಲಿ ನಾನೂ ಭಾಗಿಯಾಗಿದ್ದೇನೆ. ಅವರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ. ಈ ಸಂದರ್ಭದಲ್ಲಿ ಗೌರವ ಪೂರ್ವಕವಾಗಿ ಸಭೆ ಎದ್ದು ನಿಂತು ಎರಡು ನಿಮಿಷಗಳಕಾಲ ಮೌನದಿಂದಿರಬೇಕೆಂದು ಸೂಚಿಸುತ್ತೇನೆ.

(ಸದಸ್ಯರೆಲ್ಲರೂ ಎದ್ದು ನಿಂತು, ಎರಡು ನಿಮಿಷಗಳ ಕಾಲ ಮೌನದಿಂದಿದ್ದು ದಿವಂಗತರ ಆತ್ಮಕ್ಕೆ ಗೌರವವನ್ನು ಸೂಚಿಸಿದರು.)

Change in the Programme of Business.

Sri K. HANUMANTHAIYA (Chief Minister)—Sir, may I place a request before you and the House? In the agenda for the session, 21st is earmarked for Voting of Demands for Supplementary Grants and the next day for the debate on Food Situation and consideration of Levy System. The main problem that has to be discussed during this session is about the food policy. Government, in fact, are eagerly awaiting the opinions and the suggestions that are to be made on the floor of the House. I was very anxious to consult every party in this House so that the Government might be in a position to evolve a satisfactory system of procurement or levy or whatever is its name. I therefore request that this urgent question may be taken up tomorrow for discussion and the subject allotted for tomorrow be transferred to the day allotted for food debate.

Mr. SPEAKER.—I think the House has no objection; it may be done.

Hon'ble Members.—Yes.